INDIAN JOURNAL OF HISTORY AND ARCHAEOLOGY
ISSN (e):2582-225X www.ijha.in
Vol-7, Issue -4, July-August, 2025
PageNo,-53-60
Peer -Reviewed, Refereed Journal

# ಶಾಸನಗಳ ಹಿನ್ನೆಲೆಯಲ್ಲಿ ತಿ. ನರಸೀಪುರ ತಾಲ್ಲೂಕಿನ ಜೈನಧರ್ಮದ ನೆಲೆಗಳು

*ಕೆ.ಎಸ್.ಅರುಣ್ ಕುಮಾರ್.[1]
**ಪ್ರೊ.ಎಂ.ಜಿ. ಮಂಜುನಾಥ.[2]

"ದಕ್ಷಿಣ ಭಾರತದ ಜೈನಧರ್ಮದ ಇತಿಹಾಸವೆಂದರೆ ಕರ್ನಾಟಕದ ಜೈನಧರ್ಮದ ಇತಿಹಾಸವೇ ಆಗಿದೆ" ಎಂದು ಡಾ.ಬಿ.ಎ.ಸಾಲೆತೊರೆಯವರ ಅಭಿಪ್ರಾಯವಾಗಿದೆ.[1] ಕ್ರಿಸ್ತಪೂರ್ವದಿಂದಲೂ ಅಸ್ತಿತ್ವದಲ್ಲಿದ್ದು, ಉತ್ತರ ಭಾರತದಿಂದ ದಕ್ಷಿಣಕ್ಕೆ ಬಂದು ನೆಲೆಸಿದ ಧರ್ಮವಾಗಿದೆ. ಬೌದ್ಧಧರ್ಮಕ್ಕಿಂತಲೂ ಪ್ರಾಚೀನ ಧರ್ಮವೆಂದು ಸ್ಥಿರಪಟ್ಟಿದ್ದು, ಮೋಕ್ಷವನ್ನು ಪಡೆದು ಸಿದ್ಧರಾದ 24 ತೀರ್ಥಂಕರರನ್ನು ಪೂಜಿಸುವರು. ಇವರು ಐತಿಹಾಸಿಕ ಪುರುಷರಲ್ಲ. ಸಂಸ್ಥಾಪಕನಾದ ಆದಿ ತೀರ್ಥಂಕರ ವೃಷಭದೇವನಿಂದ ಆರಂಭಗೊಂಡು ಬುದ್ಧನ ಸಮಕಾಲೀನ ಮಹಾವೀರನವರೆಗೂ ಜೀವಿಸಿದ್ದರು. ಆದರೆ ಕ್ರಿ.ಪೂ. 8ನೇ ಶತಮಾನದಲ್ಲಿ 23ನೇ ತೀರ್ಥಂಕರನಾದ ಪಾರ್ಶ್ವನಾಥವರೆಗೂ ಜೈನಧರ್ಮದ ಇತಿಹಾಸ ತಲುಪಬಹುದು. ಅವನಿಂದಾಚೆಗೆ ಪೌರಾಣಿಕ ಕಟ್ಟುಕಥೆಗಳ ಮಂಜು ಮಸುಕಿದೆ.

ಹಿಂಸಾ ಮೂಲವಾದ ಯಜ್ಞಗಳನ್ನು ಪ್ರತಿಭಟಿಸಿದ ಜೈನಧರ್ಮವು 'ಅಹಿಂಸಾ ಪರಮೋ ಧರ್ಮಃ' ಎಂಬುದನ್ನು ನಿಷ್ಠುರವಾದ ನಿಷ್ಠೆಯಿಂದ ಆಚರಿಸಿದರು. ಪಂಚಾಣುವ್ರತಗಳಾದ ಅಹಿಂಸೆ, ಸತ್ಯ, ಆಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹಗಳು ಈ ಧರ್ಮದ ನೈತಿಕ ಸಾಧನೆಯ ನೆಲೆಗಳು. ಪ್ರಸ್ತುತ ಲೇಖನವು ಶಾಸನಗಳನ್ನು ಮೂಲಾಧಾರವಾಗಿಸಿ ತಿ. ನರಸೀಪುರ ತಾಲ್ಲೂಕಿನಲ್ಲಿ ಜೈನಧರ್ಮದ ಅಸ್ತಿತ್ವದ ಕುರುಹುಗಳನ್ನು ವಿಶ್ಲೇಷಿಸಲಾಗಿದೆ.

ಭದ್ರಬಾಹು ಮುನಿಗಳು ಮತ್ತು ಸಂಪ್ರತಿ ಚಂದ್ರಗುಪ್ತನು ಸಲ್ಲೇಖನ ವ್ರತದಿಂದ ಸಮಾಧಿ ಹೊಂದಿದ್ದು, ಕಟವಪ್ರ ಅಥವಾ ಕಳ್ವಪು (ಚಂದ್ರಗಿರಿ ಬೆಟ್ಟದಲ್ಲಿ) ಎಂಬಲ್ಲಿ. ಕಳ್ವಪ್ಪು ಭೇಟಿಗೂ ಮುನ್ನ ಪುನ್ನಾಟದ ರಾಜಧಾನಿಯಾಗಿದ್ದ ಕೀರ್ತಿಪುರವನ್ನು ಸಂದರ್ಶಿಸಿದ್ದನು. ಇದು ಇಂದಿನ ಚಾಮರಾಜನಗರ, ಮೈಸೂರು ಜಿಲ್ಲೆಯ ಪ್ರದೇಶಗಳನ್ನು ಒಳಗೊಂಡಿದ್ದ ಪುಟ್ಟ ರಾಜ್ಯವಾಗಿತ್ತು. ಈ ಭೇಟಿಯಿಂದ ಕೀರ್ತಿಪುರವೊಂದು ಪ್ರಸಿದ್ಧ ಜೈನಕೇಂದ್ರವಾಗಿತ್ತು ಎಂಬುದಕ್ಕೆ ಸಾಕ್ಷಿಯಾಗಿದೆ. ಹೀಗೆ ಜೈನಧರ್ಮದ

---

1.ಸಂಶೋಧನಾ ವಿದ್ಯಾರ್ಥಿ, ಕನ್ನಡ ವಿಭಾಗ,ಸ್ನಾತಕೋತ್ತರ ಕೇಂದ್ರ, ಹಾಸನ,ಮೈಸೂರು ವಿಶ್ವವಿದ್ಯಾನಿಲಯ.
2.ಪ್ರಾಧ್ಯಾಪಕರು, ಸ್ನಾತಕೋತ್ತರ ಕೇಂದ್ರ, ಹಾಸನ, ಮೈಸೂರು ವಿಶ್ವವಿದ್ಯಾನಿಲಯ.

ಕುರುಹುಗಳು ತಿ. ನರಸೀಪುರ ತಾಲ್ಲೂಕಿನ ತಲಕಾಡು, ಮೂಗೂರು, ನರಸೀಪುರ, ಜೋಡಿಬಸವನಪುರ, ಚಿದರವಳ್ಳಿ, ನಿಲಸೋಗೆ, ಆಲ್ಗೋಡು ಮುಂತಾದ ಪ್ರಮುಖ ಜೈನ ಕೇಂದ್ರಗಳಾಗಿದ್ದವು ಎಂಬುದನ್ನು ಅಲ್ಲಿ ದೊರೆಯುವ ಶಾಸನಗಳಿಂದಲೇ ಗುರುತಿಸಲಾಗಿದೆ.

**1. ಚಿದರವಳ್ಳಿ :**

ತಿ. ನರಸೀಪುರ ತಾಲ್ಲೂಕಿನ ಚಿದರವಳ್ಳಿ ಗ್ರಾಮದ ಶಾಸನವು ಕೊಂಡಕುಂದನ್ವಯ ನಂದಿದೇವರ ಶಿಷ್ಯೆಯಾದ ನಾಗಿಯಬ್ಬೆಕಂತಿಯ ಸಾವಿನ ಬಗ್ಗೆ ಮಗನಾದ ಕರಿಯಮನವರು ಹೊರಡಿಸಿದ ಶಾಸನವಾಗಿದೆ.[2] ಪ್ರಸ್ತುತ ಶಾಸನದಲ್ಲಿರುವಂತೆ ಕಂತಿಯರು ಎಂದರೆ ಜೈನ ಸನ್ಯಾಸಿಯರು, ಅಜ್ಜಿಯರು ಎಂದು ಕರೆಯುತ್ತಾರೆ. ಬೌದ್ಧ ಧರ್ಮದಲ್ಲಿ ಮೊದ ಮೊದಲು ಸ್ತ್ರೀಯರಿಗೆ ಸನ್ಯಾಸವನ್ನು ನಿರಾಕರಿಸುತ್ತಿದ್ದರು. ಆದರೆ ಬುದ್ಧನಿಗಿಂತ ಹಿಂದೆಯೇ ಜೈನ ಧರ್ಮವು ಸ್ತ್ರೀಯರಿಗೆ ಸನ್ಯಾಸವನ್ನು ನೀಡಿತ್ತು. ಆದಿವೃಷಭನ ಹತ್ತಿರ ಬ್ರಾಹ್ಮೀ ಮತ್ತು ಸುಂದರಿಯರ ನೇತೃತ್ವದಲ್ಲಿ ಮೂರು ಲಕ್ಷ ಸನ್ಯಾಸಿನಿಯರಿದ್ದರೆಂದು ಹೇಳುತ್ತಾರೆ. ಆದರೆ ಇವರು 'ಲೋಯ' ಎಂದರೆ ಕೇಶವಿಚ್ಛೇದನವನ್ನು ಮಾಡಿಸಿಕೊಳ್ಳಬೇಕಿತ್ತು. ಆದರೆ ನಗ್ನತೆಯನ್ನು ವಿಧಿಸಿರಲಿಲ್ಲ. ಬಿಳಿ ಬಟ್ಟೆ ಧರಿಸಿ, ನೀರಿನಲ್ಲಿ ಒಗೆಯದೆ ತೇವ ಮಾಡಿ ಬಿಸಿಲಿನಲ್ಲಿ ಒಣಗಿಸಬಹುದಾದ ನಿಯಮಗಳಿದ್ದವು. ಇವರು ಈ ಜನ್ಮದಲ್ಲಿ ತಪಸ್ಸಿನಿಂದ ಕರ್ಮಕ್ಷಯ ಮಾಡಿಕೊಂಡು ಮುಂದಿನ ಜನ್ಮದಲ್ಲಿ ಪುರುಷರಾಗಿ ಹುಟ್ಟಿ ಮೋಕ್ಷ ಸಂಪಾದಿಸಬಹುದಿತ್ತು.[3]

**2. ಜೋಡಿಬಸವನಪುರ :**

ತಿ. ನರಸೀಪುರ ತಾಲ್ಲೂಕಿನ ಜೋಡಿಬಸವನಪುರದಲ್ಲಿ ದೊರೆತಿರುವ ಜೈನ ಶಾಸನವು ಕ್ರಿ.ಶ. 1183ರ ದ್ರಾವಿಡ–ಸಂಘದ ಆರುಂಗಳಾನ್ವಯದ ಮುನಿಪರಂಪರೆಯನ್ನು ವಿವರಿಸಿದೆ.[4] ಪ್ರಸ್ತುತ ಶಾಸನದಿಂದ ತಿ. ನರಸೀಪುರ ತಾಲ್ಲೂಕಿನಲ್ಲಿ ಕ್ರಿ.ಶ. 12ನೇ ಶತಮಾನದಲ್ಲಿ ಜೈನಧರ್ಮವು ಔನ್ನತ್ಯಕ್ಕೇರಿತ್ತೆಂಬುದನ್ನು ಗುರುತಿಸಬಹುದು. ಪ್ರಸ್ತುತ ಶಾಸನವು 'ಮೂರು ಲೋಕದಲ್ಲೂ ಪ್ರಸಿದ್ಧಿ ಪಡೆದ 24ನೆ ಕೊನೆಯ ಜೈನ ತೀರ್ಥಂಕರನಾದ ವರ್ಧಮಾನರು ಜೈನರಿಗೆ, ಜೈನಮಾನ್ಯರಿಗೆ ಸಕಲ ಸಮೃದ್ಧಿಯನ್ನು ನೀಡಲಿ. ವರ್ಧಮಾನನ ಉಪದೇಶಗಳು, ಜೈನಗಣಾಧರರು ಸದಾ ತಮ್ಮ ಬೋಧನೆಯ ಮೂಲಕ ಜೈನ ಅನುಯಾಯಿಗಳ ದುಃಖವನ್ನು ನಿವಾರಿಸಲಿ, ಉಪದೇಶವು ಎಲ್ಲೆಡೆ ಪ್ರಕಾಶಿಸಲಿ, ದ್ರಮಿಳ ಸಂಘವಾಗಿದ್ದ ನಂದೀಸಂಘದಲ್ಲಿ ಅರುಂಗಲಾನ್ವಯವು ಸಾಗರದ ತೀರದುದ್ದಕ್ಕೂ ಪ್ರಜ್ವಲಿಸಲಿ' ಎಂದು ವಿವರಿಸಿದೆ.

ಜೈನಮುನಿಗಳು ಮತ್ತು ಅವರ ಸಚ್ಚಾರಿತ್ರ ಗುಣವನ್ನು ವರ್ಣಿಸುತ್ತಾ, ಸಮಂತಭದ್ರರು ವಾರಣಾಸಿ ದೇವರ ಮುಂದೆ ಜೈನ ವಿರೋಧಿಗಳನ್ನು ಸೋಲಿಸಿದರು. ದಕ್ಷಿಣಕ್ಕೆ ಬಂದ ಕುಮಾರಸೇನ ಮುನಿಯು ಇಲ್ಲಿಯೇ ಮರಣ ಹೊಂದಿದರಾದರೂ ಅವರು ಸಚ್ಚಾರಿತ್ರವಾದ ಗುಣದಿಂದ ಬ್ರಹ್ಮಾಂಡದ ಏಕೈಕ ಸೂರ್ಯನಂತೆ ಇಂದಿಗೂ ಪ್ರಜ್ವಲಿಸುತ್ತಿದ್ದಾರೆ. ಚೂಡಾಮಣಿ ಕೃತಿಯ ಲೇಖಕನು ಸುಪ್ರಸಿದ್ಧ ವ್ಯಾಖ್ಯಾನಗಳ

ರಚನೆಯಿಂದಾಗಿಯೇ ಚೂಡಾಮಣಿ ಎಂದು ಪ್ರಸಿದ್ಧರಾದ ಜಿನಮುನಿಗಳು. ಬ್ರಹ್ಮರಾಕ್ಷಸನಿಂದ ಪೂಜಿಸಲ್ಪಡುವ ಮಹದೇಶ್ವರನ ಪಾದಗಳು, ತಪಸ್ಸು ಮತ್ತು ದಾರಿದೀಪದಂತೆ ಪ್ರಜ್ವಲಿಸುವ ಪವಿತ್ರ ಜ್ಞಾನದಿಂದ ಹೊರಹೊಮ್ಮಿದ ಶಾಂತಿದೇವ ಮುನೀಶ್ವರರು ಕತ್ತಿಯಂತಹ ಹರಿತವಾದ ಮಾತಿನಲ್ಲಿ ಪ್ರಬುದ್ಧರು. ಕಮಲದ ಶ್ರೇಷ್ಠತೆಯ ಸೌಂದರ್ಯವನ್ನು ಪುಷ್ಪಸೇನಮುನಿಗಳು ಹೊಂದಿದರು. ಆಕರ್ಷಕ ಚರಣಗಳನ್ನು ಹೊಂದಿದ್ದ, ಜೈನ ವಿರೋಧಿಗಳಾದ ಶೈವರು, ಪಾಶುಪತರು, ತಥಾಗತದ ಅನುಯಾಯಿಗಳು, ಮತ್ತು ಕಪಿಲರನ್ನು ದೂಷಿಸುವ ರಾಜನ ಉತ್ತಮ ಆನೆಗಳು ಮತ್ತು ಕುದುರೆಗಳ ಸಮೂಹ ಸಂಚರಿಸುವ ಮಾರ್ಗದಲ್ಲೆಲ್ಲ ವಿಮಲಚಂದ್ರನ ಕೀರ್ತಿ ಚಂದ್ರರಶ್ಮಿಯಂತೆ ಹರಡಿತ್ತು. ಸಂತರಲ್ಲೇ ಶ್ರೇಷ್ಠರು, ಜೈನರ ಪೂಜನೀಯ ಪ್ರತಿಷ್ಠಾ ಮತ್ತು ಜ್ವಾಲಿನಿಕಲ್ಪಾಸ್ ರಚಿಸಿದ ಇಂದ್ರನಂದಿ ಮುನಿಗಳು. ಪರವಾದಿ ಮಲದೇವನು ಜ್ಞಾನದ ಸಂಪತ್ತೇ ಆಗಿದ್ದನು. ಮೂಲಧಾರಿ, ಅಜಿತಸೇನ, ತ್ರೈವಿದ್ಯಾಪತಿಗಳು ದಿವಾಕರ ದೇವರ ಶಿಷ್ಯರಾಗಿದ್ದ ಚಂದ್ರಪ್ರಭಾ ಮುನಿಗಳು ದ್ರಾವಿಡಸಂಘವಾದ ನಂದಿಸಂಘಕ್ಕೆ ಸೇರಿದ ಜೈನಗುರುಗಳು ಸಲ್ಲೇಖನ ವ್ರತದಿಂದ ಮರಣಿಸಿದರೆಂದು ಉಲ್ಲೇಖಿಸುವ ಮೂಲಕ ಜೈನ ಧರ್ಮದ ಕುರಿತಾದ ಹಲವು ಅಂಶಗಳನ್ನು ಸವಿಸ್ತಾರವಾಗಿ ವಿವರಿಸಿದೆ :

**3. ತಲಕಾಡು :**

ಗಂಗವಂಶದ ಮೂಲಪುರುಷರು ಸಿಂಹನಂದಿ ಮುನಿಗಳಾದ ಜೈನಾಚಾರ್ಯರ ಆಶೀರ್ವಾದದಿಂದ ರಾಜ್ಯ ಕಟ್ಟಿದರೆಂಬ ಐತಿಹ್ಯಗಳು ಶಾಸನಗಳಲ್ಲಿವೆ. ಜೈನ ಗುರುಗಳ ಪ್ರಭಾವದಿಂದ ಜೈನಧರ್ಮವು ಗಂಗರ ರಾಜಾಶ್ರಯವನ್ನು ಪಡೆದಿತ್ತು ಮತ್ತು ಸಿಂಹಣಂದಿ ಆಚಾರ್ಯರನ್ನು ಗಂಗರಾಜ್ಯ ಸಮುದ್ಧರಣ ಎಂದು ಶಾಸನಗಳು ಕೀರ್ತಿಸಿವೆ. ಗಂಗರ ಕಾಲದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಜೈನಧರ್ಮವು ರಾಜಧಾನಿಯಾದ ತಲಕಾಡು ಅಥವಾ ತಳವನಪುರದಲ್ಲಿ ಜೈನ ಬಸದಿಗಳು ಅಥವಾ ಜಿನಾಲಯಗಳ ಅವಶೇಷ ದೊರೆತಿಲ್ಲ. ಇವು ಪ್ರಾಕೃತಿಕ ಒತ್ತಡದ ಸನ್ನಿವೇಶದಿಂದ ಭೂಗರ್ಭದಲ್ಲಿ ಸೇರಿಹೋಗಿವೇ ಇಲ್ಲ ಶಿಥಿಲವಾಗಿವೆಯೆಂದು ಡಾ. ದೇವರಕೊಂಡಾರೆಡ್ಡಿಯವರು ಅಭಿಪ್ರಾಯ ಪಟ್ಟಿದ್ದಾರೆ.[5] ಇದಕ್ಕೆ ಪೂರಕವಾಗಿ ಡಾ. ಎನ್.ಎಸ್. ರಂಗರಾಜು ಮತ್ತು ಅವರ ತಂಡದವರ ಉತ್ಖನನವು ತಲಕಾಡಿನ ಕೀರ್ತಿನಾರಾಯಣ ದೇವಾಲಯದ ವಾಯುವ್ಯ ದಿಕ್ಕಿಗೆ ಸು. 1 ಕಿ.ಮೀ. ದೂರದ ಮಣ್ಣಿನ ದಿಬ್ಬವು ಸ್ಥಳೀಯರಿಂದ ಬಸದಿ ಮಾಳವೆಂದು ಕರೆಸಿಕೊಳ್ಳುತ್ತಿದ್ದು, ಜೈನ ಬಸದಿಯ ಅವಶೇಷಗಳು ಪತ್ತೆಯಾಗಿವೆ.

ಗಂಗ ಸಾಮ್ರಾಜ್ಯದ ಅವನೀತನ ಸಮಕಾಲೀನ ಗುರುಗಳಾದ ಸಿಂಹನದಿ, ದುರ್ವಿನೀತರ ಸಮಕಾಲೀನ ಜೈನ ಮುನಿಗಳು ಜಯಕೀರ್ತಿ ಹಾಗೂ ಪೂಜ್ಯಪಾದರು, ಶಿವಮಾರನ ಗುರುಗಳು ತೋರಹಾಚಾರ್ಯ ಮತ್ತು ಅಜಿತಸೇನರು, ಮಾರಸಿಂಹ ಹಾಗೂ ಚಾವುಂಡರಾಯನ ಗುರುಗಳಾದ ಅಜಿತಸೇನರ ಮಾರ್ಗದರ್ಶನದಲ್ಲಿ ಗಂಗರ ಆಳ್ವಿಕೆಯ ಕಾಲದಲ್ಲಿ ಜೈನಧರ್ಮದ ಪ್ರಭಾವವು

ಅಧಿಕವಾಗಿದ್ದಿತು. ಕ್ರಿ.ಶ. 987–88ರ ತಲಕಾಡಿನ ಶಾಸನವು ತಿ. ನರಸೀಪುರ ತಾಲ್ಲೂಕಿನ ತಲಕಾಡಿನಲ್ಲಿ ದೊರೆಯುವ ಮೊದಲ ಜೈನಧರ್ಮದ ಶಾಸನವು 'ಸ್ವಸ್ತಿ ಶಕನೃಪಕಾಳಾಂತ ಸಂವತ್ಸರ ಮೊ.ಯ್ದೂಱುವೊಂಭತ್ತನೆಯ ವ್ಯಯ ಸಂವತ್ಸರದೊಳ್ ಮುಡಿಪು ದೇಕಬ್ಬೆ ಸಂಗತಿಯು ಕೊಣ್ಡಳ್' ಎಂದಿದ್ದು, ಮುಡಿಪು ಎಂದರೆ ಜೈನ ಧರ್ಮದ ಪರಿಭಾಷೆಯಲ್ಲಿ ಆಹಾರವನ್ನು ತ್ಯಜಿಸುವ, ಮೋಹದಿಂದ ಬಿಡಿಸಿಕೊಳ್ಳುವ, ಮಡಿಯುವ ಎಂಬರ್ಥಗಳಿದ್ದು, ಪ್ರಾಯಶಃ ನಿಶಿಧಿಯಾಗಿದೆ.[6]

ಕ್ರಿ.ಶ. 14ನೇ ಶತಮಾನದ ತಲಕಾಡಿನ ವೈಕುಂಠನಾರಾಯಣ ದೇವಸ್ಥಾನದ ಪಶ್ಚಿಮ ಕಡೆಯ ಹೊರಭಿತ್ತಿಯಲ್ಲಿನ ಜಿನಬಿಂಬದ ಕೆಳಗಿನ ಶಾಸನವು ಶ್ರೀಮದ್ರಾವಿಳಸಂಘ ನಂದಿಗಣಗಳನ್ನು ಉಲ್ಲೇಖಿಸಿದ್ದು, ಪ್ರಸ್ತುತ ಶಾಸನವು "ಶ್ರೀಮತು ಮಹಾಮಂಡಳಾಚಾರ್ಯ್ಯರು ಕಮಳದೇವರ ಸಿಷ್ಯ ಕುಲೋಕಾಚಾರ್ಯ್ಯರು" ಎಂದಿದೆ.[7]

**ಎ. ತಲಕಾಡಿನ ಶ್ರೀವಿಜಯ ಜಿನಾಲಯ :** ಕೊಡಗು ಜಿಲ್ಲೆಯ ಮಡಿಕೇರಿಯಲ್ಲಿ ದೊರೆತಿರುವ ಒಂದು ಶಾಸನವು ದುರ್ವಿನೀತನ ಕಾಲದಲ್ಲಿ ತಳವನಪುರದಲ್ಲಿರುವ ಶ್ರೀವಿಜಯ ಜಿನಾಲಯಕ್ಕೆ ಬದನಗುಪ್ಪೆ ಮತ್ತಿತರ ಗ್ರಾಮಗಳನ್ನು ದತ್ತಿಯಾಗಿ ದೇಸಿಗಣದ ಕೊಂಡಕುಂದಾನ್ವಯದ ಚಂದ್ರಣಾಂದಿ ಭಟಾರರಿಗೆ ನೀಡಿದರೆಂದು ಉಲ್ಲೇಖಿಸುತ್ತದೆ.[8] ಪ್ರಸ್ತುತ ಶಾಸನದಿಂದ ಜೈನಾಚಾರ್ಯರಾದ ದೇಸಿಗಣದ ಕೊಂಡಕುಂದಾನ್ವಯದ ದೀರ್ಘಗುರುಪರಂಪರೆಯನ್ನು ನೀಡಲಾಗಿದೆ. ಅವನೀತನ ಕಾಲದಲ್ಲಿ ಉಲ್ಲೇಖಿಸಿದ ಜಿನಾಲಯವು ಉಲ್ಲೇಖಿಸಿದ ಜಿನಾಲಯವು ಆತನಿಗಿಂತಲೂ ಪೂರ್ವದಲ್ಲಿ ಅಂದರೆ ಕ್ರಿ.ಶ. 469ರ ರಾಜ್ಯಭಾರವಹಿಸಿಕೊಂಡ ಕಾಲಾವಧಿಗಿಂತ ಹಿಂದೆ ನಿರ್ಮಾಣಗೊಂಡಿದೆ. ಈ ಅಂಶವನ್ನು ಆಧರಿಸಿ ಡಾ.ಎಂ.ವಿ.ಕೃಷ್ಣರಾವ್‌ರವರು 'ಜೈನಧರ್ಮವು ಗಂಗರ ರಾಷ್ಟ್ರೀಯ ಧರ್ಮವಾಗಿತ್ತೆಂದು'[9] ಅಭಿಪ್ರಾಯಪಟ್ಟಿದ್ದಾರೆ.

**ಬಿ.ತಲಕಾಡಿನ ಎರೆಯನ ಬಸದಿ :**"ಸಳನೆಂಬಂ ಜಿನಮುನಿ ಹೊಯ್‌ಸಳೆಯಿಂದಂ ಪುಲಿಯನೆಂದೊಡೆಗೊಂಡು ಮಹೀತಳವಾವ್ವೆನೆಗಂ ಪೊಯೆ ಪೊಯ್ಸಳವೆಸರಂ ತಳೆದುದಿತ್ತ ಯಾದವವಂಶಂ"[10] ಇದು ಹೊಯ್ಸಳ ಅರಸರು ಜೈನ ಧರ್ಮದ ವೈಭವೀಕರಣಕ್ಕೆ ಮಾಡಿದ ಕಲ್ಪಿತ ಕಥೆಯಾಗಿ ಜೈನಧರ್ಮದ ಹಿನ್ನೆಲೆಯಲ್ಲಿ ವಿವರಿಸಿದ್ದಾರೆ. ಅದರಂತೆ ಹೊಯ್ಸಳರು ಜೈನಧರ್ಮಕ್ಕೆ ನೀಡಿದ ಪ್ರೋತ್ಸಾಹವನ್ನು ಗಮನಿಸಬಹುದು. ಕ್ರಿ.ಶ.1173ರ ಇಮ್ಮಡಿ ವೀರಬಲ್ಲಾಳನ ಆಳ್ವಿಕೆಯ ಕಾಲದ ಮೈಸೂರು ತಾಲ್ಲೂಕಿನ ಬುಜಗೌಡನಪುರದ ಶಾಸನವು ರಾಜರಾಜಪುರ ಎಂದು ಹೆಸರಾದ ತಲಕಾಡಿನ ಎರೆಯನ ಬಸದಿಗೆ ಪ್ರತಿನಿತ್ಯದ ನೈವೇದ್ಯ ಮತ್ತು ಬಸದಿ ಜೀರ್ಣೋದ್ಧಾರಕ್ಕೆ, ಕುಪ್ಪೂರಿನ ಸಮಸ್ತ ಸೀಮೆಯನ್ನು ನಾಗಚಂದ್ರ ಪಂಡಿತನಿಗೆ ದತ್ತಿಯಾಗಿ ನೀಡಿದ್ದನ್ನು ಉಲ್ಲೇಖಿಸುತ್ತದೆ.[11] ಇದು ತಲಕಾಡಿನ ಶ್ರೀವಿಜಯ

ಜಿನಾಲಯದಂತೆ ಗಂಗರಾಜ ಎರೆಯಂಗ, ಎರೆಯಪ್ಪ ಎಂಬುವವರ ಹೆಸರಿನ ಸಾಮ್ಯತೆಯ ಎರೆಯನ ಬಸದಿ ಇತ್ತೆಂಬುದನ್ನು ಗುರುತಿಸಬಹುದು.

ಸಿ. **ತಲಕಾಡಿನ ಆನೆ ಬಸದಿ :** 3ನೇ ನರಸಿಂಹನ ಕ್ರಿ.ಶ. 1265ರ ಮಳವಳ್ಳಿ ತಾಲ್ಲೂಕಿನ ಹುಸ್ಕೂರು ಶಾಸನವು ತಲಕಾಡಿನ ಆನೆ ಬಸದಿಯನ್ನು ಉಲ್ಲೇಖಿಸುತ್ತದೆ.[12] ಈ ಶಾಸನವು ಸೇನಾಪತಿ ಚಟ್ಟೊಡೆಯನು ಕ್ರಿ.ಶ. 1078ರಲ್ಲಿ ನಿರ್ಮಿಸಿದನೆಂದು ಹೇಳಿದೆ. ಈ ಬಸದಿಗೆ 'ಬಣ್ಣಿದರಹಳ್ಳಿಯ ಮಾರಗೌಂಡನ ಮಗ ಮಂಚಗೌಂಡ ಹಾಗೂ ಇತರರು ಬಣ್ಣಿಗದೆರೆಯನ್ನು ದತ್ತಿ ಬಿಟ್ಟಂತೆ ತೋರುತ್ತದೆ ಎಂದು ಡಾ. ಎಸ್. ನಂಜುಂಡಸ್ವಾಮಿಯವರು ಗುರುತಿಸಿದ್ದಾರೆ.[13] ಮೂರನೇ ಬಲ್ಲಾಳನ ಕಾಲದಲ್ಲಿ, ತಳಕಾಡಾದ ರಾಜರಾಜಪುರದ ಏಳುಪುರದ ಪಂಚಮಠ ಸ್ಥಾನಪತಿಗಳ ಮೂಲಕ ಆನೆಬಸದಿಯ ಆದಿದೇವರಿಗೆ ದೇವಶೆಟ್ಟಿಜೀಯರ ಮರಕೋಜ, ಭೈರವದೇವ, ಹುಸಗೂರ ಹಲವಾರು ಗೌಡರು, ಹೊಲಗದ್ದೆಗಳು, ಆಲೆಮನೆ, ಗುಡಿಸಲು ಸುಂಕಗಳನ್ನು ದತ್ತಿ ನೀಡಿದರೆಂದು ಉಲ್ಲೇಖಿಸುತ್ತದೆ.[14] ಆದರೆ ಈ ಬಸದಿಯ ನೆಲೆ ಮತ್ತು ಅವಶೇಷಗಳನ್ನು ಗುರುತಿಸಲಾಗಿಲ್ಲ.

**ಡಿ. ತಲಕಾಡಿನ ಚಂದ್ರಗುಪ್ತ ಬಸದಿ :** ಇತ್ತೀಚೆಗೆ ತಲಕಾಡಿನ ಉತ್ಖನನದಲ್ಲಿ ದೊರೆತ ಅನೇಕ ಸಂಗತಿಗಳನ್ನು ಆಧರಿಸಿ ಜೈನ ಬಸದಿಯೊಂದರ ಇಟ್ಟಿಗೆ ಅವಶೇಷಗಳು ದೊರೆತಿದ್ದು, ಅದರ ಅದಿಷ್ಠಾನದ ಮಾದರಿಯಿಂದ ಅದನ್ನು ಚಂದ್ರಗುಪ್ತ ಬಸದಿಗೆ ಹೋಲಿಸಬಹುದಾಗಿದೆ ಮತ್ತು ಆರು – ಏಳನೆಯ ಶತಮಾನಕ್ಕೆ ಸೇರಿರಬಹುದೆಂದು ವಿದ್ವಾಂಸರು ಗುರುತಿಸಿದ್ದಾರೆ.[15] ಹೀಗೆ ತಲಕಾಡು ಪ್ರಸಿದ್ಧ ಜೈನತೀರ್ಥವಾಗಿತ್ತು. ಮತ್ತಷ್ಟು ಜೀವಂತ ಆಧಾರಗಳಿಗೆ ಉತ್ಖನನವು ಅವಶ್ಯಕವಿದೆ.

**ತಿ. ನರಸೀಪುರ :**

ತಿ. ನರಸೀಪುರ ಗ್ರಾಮದ ಶಾಸನವು ಜೈನಸಂಘಗಳ ಆಚಾರ್ಯರು ಇಲ್ಲಿ ತಮ್ಮ ನೆಲೆಯನ್ನು ಸ್ಥಾಪಿಸಿದ್ದರು ಎಂಬುದಕ್ಕೆ ಸಾಕ್ಷಿಯಾಗಿದೆ. ಪ್ರಸ್ತುತ ಶಾಸನದಲ್ಲಿ 'ಶ್ರೀ ಮೂಲ ಸಂಘ ದೇಸಿಗಣ ಪುಸ್ತಕಗಚ್ಚ ಕೊಂಡ ಕುಂದಾನ್ವಯ' ಎಂದು ಉಲ್ಲೇಖಿಸಿದೆ.[16] ಜೈನ ಮುನಿಗಳ ಹೆಸರು ತಿಳಿಸುವಾಗ ಸಂಘ, ಗಣ, ಗಚ್ಛ, ಅನ್ವಯ ಮತ್ತು ಬಳಿ ಎಂದು ಉಲ್ಲೇಖಿಸುವ ಸಂಪ್ರದಾಯವಿದೆ. ಇವು ಬಹುಮಟ್ಟಿಗೆ ಕ್ರಿ.ಶ. 5ನೇ ಶತಮಾನದಿಂದ ಅಸ್ತಿತ್ವದ್ದಲ್ಲಿದ್ದು, ಸಂಪ್ರದಾಯಸ್ಥರು ತಾವು ಸೇರಿದ ಸಂಘ, ಗಣ, ಗಚ್ಚಗಳನ್ನು ಹೇಳಿಕೊಳ್ಳುವುದು ರೂಢಿ. ಇವುಗಳಲ್ಲಿ ಸಂಘವು ಪ್ರಧಾನವಾಗಿದೆ. ಅದರ ಶಾಖೆಗಳು ಗಣಗಳು, ಗಣದ ಶಾಖೆಗಳು ಗಚ್ಚ. ಗಚ್ಚದ ಶಾಖೆ ಅನ್ವಯ ಎಂದು ವಿದ್ವಾಂಸರಾದ ಡಾ. ಎಂ. ಚಿದಾನಂದಮೂರ್ತಿಯವರು ವಿಶ್ಲೇಷಿಸಿದ್ದಾರೆ.[17]

**5. ಮೂಗೂರು**

ಮೂಗೂರು ಒಂದು ಪ್ರಸಿದ್ಧ ಜೈನತೀರ್ಥವಾಗಿದ್ದು, ಮೂರು ಬಸದಿಗಳ ಉಲ್ಲೇಖವನ್ನು ಶಾಸನಗಳಿಂದ ಗುರುತಿಸಬಹುದು. ಪ್ರಸ್ತುತ ಪಾರ್ಶ್ವನಾಥ ಬಸದಿ ಮತ್ತು ಆದಿನಾಥ ಬಸದಿಗಳು ಅಸ್ತಿತ್ವದಲ್ಲಿವೆ.

**ಎ. ಮೂಗೂರಿನ ಸಿವಾಲಯ್ಯನ ಬಸದಿ :** ಕ್ರಿ.ಶ. 10ನೇ ಶತಮಾನದ ಮೂಗೂರಿನ ತಿಬ್ಬಾದೇವಿ ಗುಡಿಯ ಪ್ರಾಕಾರದಲ್ಲಿ ನೆಟ್ಟಿದ ಶಾಸನವು ಸಿವಾಲಯ್ಯನ ಬಸದಿಯನ್ನು ಹಾಗೂ ಬಸದಿಯಲ್ಲಿ ವಾಸಿಸುತ್ತಿದ್ದ ಕಂತಿಯರನ್ನು ಉಲ್ಲೇಖಿಸುತ್ತದೆ.[18] ಪ್ರಸ್ತುತ ಶಾಸನವು 'ಮೇಗೂರಿನ ಸಿವಲಯ್ಯನ ಬಸದಿಯು ತೊಯ್ವಬ್ಬೆಯ ಹಿರಿಯ ಶಿಷ್ಯಳಾದ ಅಮಿಬ್ಬೆ ಕಂತಿಯು ನೋನ್ತು ಮುಡುಪಿದಾಗ, ಅಯ್ಯಬ್ಬೆ ಕಂತಿಯರು ಕಲ್ಲನಿರಿಸಿ ಆಕೆಯನ್ನು ಸ್ಮರಿಸಿದರು' ಎಂಬ ವಿಷಯವನ್ನು ಶಾಸನವು ಪ್ರಸ್ತುತಪಡಿಸಿದೆ. ಅಂತೆಯೇ ಸಿವಾಲಯ್ಯನ ಬಸದಿಯು ಶಾಸನದ ಉಲ್ಲೇಖದಲ್ಲಿ ಮಾತ್ರವೇ ಜೀವಂತವಾಗಿದೆ.

**ಬಿ. ಪಾರ್ಶ್ವನಾಥ ಬಸದಿ :** ಮೂಗೂರಿನಲ್ಲಿ ಪ್ರಸ್ತುತ ಕಾಣಸಿಗುವ ಎರಡು ಜೈನ ಬಸದಿಗಳಿದ್ದ ಅಂಶವನ್ನು 13ನೇ ಶತಮಾನದ ಎರಡು ಶಾಸನಗಳಿಂದಲೇ ಗುರುತಿಸಬಹುದು. "ಮೂಲಸಂಘ ದೇಸಿಗಣ ಪುಸ್ತಕಗಚ್ಚ ಕೊಂಡಕುಂದಾನ್ವಯ ಇಂಗಣೇಶ್ವರಸಂ[ಘ]ದ ಶ್ರೀ ಭಾನುಕೀರ್ತಿಪಂಡಿತದೇವರ ಶಿಷ್ಯರಪ್ಪ ಕಾನ . . . . . . ನಂದಿದೇವರ ಗುಡ್ಡುಗಳಪ್ಪ ಮೂಗೂರ ಸಮಸ್ತ ಗಾವುಂಡುಗಳು . . . . . .ಚ ಕೊಡೆಯರ ಬಸದಿಯ ಜನ್ನೋರ್ದ್ಧರಣವಮ್ಮಾಡಿ"[19] ಮೂಗೂರಿನ ಪಾಶ್ವನಾಥ ಬಸ್ತಿಯಲ್ಲಿ ಪಾರ್ಶ್ವನಾಥ ಸ್ವಾಮಿಯ ಪೀಠದಲ್ಲಿ ಇಂತಿದ್ದು, ಇಂಗಳೇಶ್ವರ ಸಂಘಕ್ಕೆ ಸೇರಿದ ಭಾನುಕೀರ್ತಿ ಪಂಡಿತರು ಕೊಡೆಯಾರ ಬಸದಿಯನ್ನು ಜೀರ್ಣೋದ್ಧಾರ ಮಾಡಿಸಿದಾಗ ಊರ ಗೌಡರು ನೀಡಿದ ದಾನವನ್ನು ಉಲ್ಲೇಖಿಸುತ್ತದೆ.

**ಸಿ. ಆದಿನಾಥ ಬಸದಿ :** ಮೂಗೂರಿನ ಮತ್ತೊಂದು ಬಸದಿ, ಆದಿನಾಥ ಬಸದಿಯಲ್ಲಿರುವ ಆದಿನಾಥನ ಪೀಠದಲ್ಲಿ "ಶ್ರೀ ಮೂಲಸಂಘ ದೇಸಿಯಗಣ ಪುಸ್ತಕಗಚ್ಛ ಕೊಂಡಕುಂದಾನ್ವಯ ಕ. ಹಗಟಿ ಯತೀರ್ತ್ಥದ ಪ್ರತಿಬದ್ಧದ ಭರತಪಂಡಿತರಿಗೆ ಜಕ್ಕಿಯಬ್ಬೆಯ ಮಗಳು . . . . ."[20] ಎಂದಿದ್ದು, ಭರತ ಪಂಡಿತರಿಗೆ ಜಕ್ಕಿಯಬ್ಬೆಯು ದಾನ ನೀಡಿದ ಅಂಶವನ್ನು ಉಲ್ಲೇಖಿಸುತ್ತದೆ.

ಈ ಶಾಸನಗಳಿರುವ ಎಡೆಯಲ್ಲಿ ಹಿಂದೆ ಇದ್ದ ಎರಡು ಬಸದಿಗಳಲ್ಲೊಂದನ್ನು (ಆದಿನಾಥ) ಸಂಪೂರ್ಣ ನವೀಕರಿಸಲಾಗಿದ್ದು, ಅಲ್ಲಿ ಆದಿನಾಥನೂ ಸೇರಿದಂತೆ ನಾಲ್ಕಾರು ಜಿನಬಿಂಬಗಳಿವೆ. ಆದಿನಾಥನನ್ನು ಸ್ಥಳೀಯ ಒಕ್ಕಲಿಗರು ಭೈರವನೆಂದು ನಂಬಿದ್ದು, ತಿಬ್ಬಾದೇವಿಯನ್ನು ಅವನ ತಂಗಿಯೆಂದು ಹೇಳುವ ವಾಡಿಕೆ ಈ ಭಾಗದಲ್ಲಿದೆ. ಉಪಗ್ರಾಮ ಹೊಸಹಳ್ಳಿಯಲ್ಲಿ ಇವಳ ಆರು ಸೋದರಿಯರ ಶಿಲ್ಪಗಳಿವೆ. ಅಲ್ಲೇ ಇರುವ ಇನ್ನೊಂದು ಬಸದಿಯು ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು, ಕೇವಲ ಸ್ತಂಭ ಹಾಗೂ ಛಾವಣಿಗಳಷ್ಟೇ ಉಳಿದಿದ್ದು, ಭಿತ್ತಿಭಾಗ ಸಂಪೂರ್ಣ ನಾಶವಾಗಿದೆ. ಆದರೂ ಅಲ್ಲಲ್ಲಿ ಇಟ್ಟಿಗೆಯ ಗೋಡೆಯ ಅವಶೇಷಗಳನ್ನು ನೋಡಬಹುದು.[21]

ಈ ಬಸದಿಯ ಗರ್ಭಗುಡಿಯಲ್ಲಿ ಪಾರ್ಶ್ವನಾಥನ ಶಿಲ್ಪವಿದೆ.[22] ಈ ಬಸದಿಯು ಚೋಳರ ವಾಸ್ತುಶೈಲಿಯನ್ನು ಹೊಂದಿರುವ ಕಂಬಗಳು ಮತ್ತು ಹೊಯ್ಸಳರ ಕಾಲಕ್ಕೆ ಸೇರಿದ ಕಂಬಗಳಿವೆ. ಆ ಒಂದು ದೃಷ್ಟಿಯಿಂದ ಈ ಮೂರು ಕಾಲದ ವಾಸ್ತು ರಚನೆ ಇಲ್ಲಿ ಇದೆ ಎಂದು ಹೇಳಲಾಗಿದೆ.[23] ಅಲ್ಲದೇ ಗಂಗರ ವಾಸ್ತುಶಿಲ್ಪಿಯ ಕಂಬಗಳು ಇದ್ದು, ಗಂಗರ ಕಾಲದಿಂದಲೇ ಪ್ರಸಿದ್ಧ ಜೈನ ಕೇಂದ್ರವಾಗಿತ್ತೆಂದು ನಂಬಬಹುದು.

**ಸೋಸಲೆ :**

ತಿ. ನರಸೀಪುರ ತಾಲ್ಲೂಕಿನ ಸೋಸಲೆ ಗ್ರಾಮದಲ್ಲಿ ದೊರೆಯುವ ಮೊದಲ ಜೈನ ಶಾಸನವು ಕ್ರಿ.ಶ. 500ರಲ್ಲಿ ದೊರೆತಿದ್ದು, ಈ ನಿಶಿದಿ ಶಾಸನದಿಂದ ಸೋಸಲೆ ಗ್ರಾಮವು ಜೈನತೀರ್ಥವಾಗಿತ್ತೆಂದು ದೇವರಕೊಂಡಾರೆಡ್ಡಿಯವರು ಗುರುತಿಸುತ್ತಾ, ಶಾಸನ ಪಾಠವನ್ನು ಈ ರೀತಿ ವಿವರಿಸುತ್ತಾರೆ. 'ಹಿಂದಿನ ಸ್ಮರಣೆಯಿಂದ ಗುರುವಿನ ಮಮತೆಯ ಮಗನೆಂದು (ಶಿಷ್ಯ) ಪರಿಗಣಿಸಲಾದ ಗುಣಸೇನನು 65 ವರ್ಷದ ನಶ್ವರ ಶರೀರವನ್ನು ಧರಿಸಿ, ಸನ್ಯಾಸವೆಂಬ ಸದ್ಬುದ್ಧಿಯನ್ನು ಆಲಯವನ್ನಾಗಿಸಿ ವಸ್ತ್ರತ್ಯಾಗವನ್ನು ಸಾಧಿಸಿ ಬೇಗನೆ ನಿರ್ಗ್ರಂಥ ಪಂಗಡದವರಿಗೆ ಆತ್ಮೀಯನಾದನು. ರತ್ನತ್ರಯದಿಂದ ಸವ್ವಧರ್ಮ್ಮದ ಏಳಿಗೆಗೆ ಕಾರಣರಾದ ಗುಣಸೇನರು ಚಾತುರ್ವ್ವರ್ಣದಿಂದ ಕೂಡಿದ ಸೋಸಲೆ ಗ್ರಾಮದಲ್ಲಿ ಅಕ್ಷಿಣಾಗುಣವನ್ನು ಸಾಧಿಸಿ ಅದನ್ನು ನಿರ್ಗ್ರಂಥ ತೀರ್ಥವನ್ನಾಗಿಸಿದನು'.[24]

ಹೀಗೆ ತಿ. ನರಸೀಪುರ ತಾಲ್ಲೂಕಿನಲ್ಲಿ ಜೈನಧರ್ಮದ ಶಾಸನಗಳು ಬೆರಳೆಣಿಕೆಯಷ್ಟಿದ್ದರೂ ಜೈನಧರ್ಮದ ಕುರುಹುಗಳು ತಲಕಾಡು, ಮೂಗೂರು, ನರಸೀಪುರ, ಜೋಡಿಬಸವನಪುರ, ಚಿದರವಳ್ಳಿ, ಸೋಸಲೆಗಳಲ್ಲಿನ ಶಾಸನಗಳಿಂದ ಹಾಗೂ ನಿಲಸೋಗೆ, ಆಲ್ಗೋಡು ಮುಂತಾದ ಗ್ರಾಮಗಳಲ್ಲಿ ದೊರೆಯುವ ಜೈನ ಶಿಲ್ಪಗಳನ್ನು ಆಧರಿಸಿ ರಾಜಮನೆತನಗಳ ಪ್ರೋತ್ಸಾಹ, ಜನಸಾಮಾನ್ಯರ ಅನುಸರಣೆಯಲ್ಲಿ ತಾಲ್ಲೂಕಿನಾದ್ಯಂತ ಕ್ರಿ.ಶ. 5ನೇ ಶತಮಾನದಿಂದಲೂ ಅಸ್ತಿತ್ವದಲ್ಲಿತ್ತು ಎಂಬುದನ್ನು ಶಾಸನಗಳನ್ನು ಆಧರಿಸಿ ಗುರುತಿಸಬಹುದು.

**ಕೊನೆಟಿಪ್ಪಣಿಗಳು**

1. ಡಾ. ಎಂ.ಜಿ. ಮಂಜುನಾಥ : **ಕರ್ನಾಟಕದ ಸಾಂಸ್ಕೃತಿಕ ಇತಿಹಾಸ** ; ಪುಟ 59.
2. ಬಾ.ರಾ.ಗೋಪಾಲ್ (ಸಂ.):EC.5 ತಿ.ನರಸೀಪುರ 101 ಚಿದರವಳ್ಳಿ, ಕ್ರಿ.ಶ. x,ಪು.500.
3 ಡಾ.ಎಂ.ಚಿದಾನಂದಮೂರ್ತಿ:**ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ(ಕ್ರಿ.ಶ. 450–1150)**ಪು.92.
4. ಬಾ.ರಾ.ಗೋಪಾಲ್ (ಸಂ.):EC.5 ತಿ.ನರಸೀಪುರ 38 ಜೋಡಿಬಸವನಪುರ,ಕ್ರಿ.ಶ.1183,ಪು.432.
5. ಡಾ.ದೇವರಕೊಂಡಾರೆಡ್ಡಿ:**ತಲಕಾಡಿನ ಗಂಗರ ದೇವಾಲಯಗಳ :ಒಂದು ಅಧ್ಯಯನ** ;ಪು.3.
6. ಬಾ.ರಾ. ಗೋಪಾಲ್(ಸಂ.):EC.5 ತಿ.ನರಸೀಪುರ 181:ತಲಕಾಡು,ಕ್ರಿ.ಶ.987–88,ಪು.578.
6. ಅದೇ : EC 5 ತಿ. ನರಸೀಪುರ 181 : ತಲಕಾಡು, ಕ್ರಿ.ಶ. x ಪುಟ 578.
7. ಅದೇ : EC 5 ತಿ. ನರಸೀಪುರ 181 : ತಲಕಾಡು, ಕ್ರಿ.ಶ. x ಪುಟ 578.
8. ಅದೇ : EC 1 ಸಂಪುಟ 1 : ಮಡಿಕೇರಿ ತಾಲ್ಲೂಕು 01, ಮಡಿಕೇರಿ, ಪುಟ 1.
9. ಡಾ.ಎಂ.ವಿ.ಕೃಷ್ಣರಾವ್ ಮತ್ತು ಎಂ.ಕೇಶವಭಟ್ಟ:**ಕರ್ನಾಟಕದ ಇತಿಹಾಸ ದರ್ಶನ**:ಪು.716.
10. ಬಾ.ರಾ.ಗೋಪಾಲ್(ಸಂ.):EC 5 ತಿ.ನರಸೀಪುರ 40 ತುಂಬಲ:ತಲಕಾಡು,ಕ್ರಿ.ಶ.1180, ಪು.440.
11. ಅದೇ : EC 5 ಮೈಸೂರು 224 ಬುಜಗೌಡನಪುರ : ಪುಟ 321, ಕ್ರಿ.ಶ. 1173.
12. ಅದೇ : EC 7 ಮಳವಳ್ಳಿ 30 ಹುಸ್ಕೂರು : ಪುಟ 364, ಕ್ರಿ.ಶ. 1265.
13. ಡಾ. ಎಸ್. ನಂಜುಂಡಸ್ವಾಮಿ : **ಮಂಡ್ಯ ಜಿಲ್ಲೆಯ ಶಾಸನ ಮತ್ತು ಸಂಸ್ಕೃತಿ** ; ಪುಟ 321.
14. ಬಾ.ರಾ. ಗೋಪಾಲ್ (ಸಂ.) :EC 7 ಮಳವಳ್ಳಿ 31 ಹುಸ್ಕೂರು:ಪು.364, ಕ್ರಿ.ಶ.1313.
15. ಡಾ.ಎಸ್.ಶಿವರಾಮು,ಪ್ರೊ.ಲಿಂಗರಾಜು:ತಂಡಸನಹಳ್ಳಿ(ಸಂ.);**ಗಂಗರು:ಚರಿತ್ರೆ ಮತ್ತು ಕೊಡುಗೆಗಳು** ಪು.119.
16. ಬಾ.ರಾ.ಗೋಪಾಲ್ (ಸಂ.): EC 5 ತಿ. ನರಸೀಪುರ 11 ತಿ. ನರಸೀಪುರ, ಕ್ರಿ.ಶ. x, ಪು.329.
17. ಡಾ.ಎಂ.ಚಿದಾನಂದಮೂರ್ತಿ : **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ** ; ಪು.94–95.
18. ಬಾ.ರಾ. ಗೋಪಾಲ್ (ಸಂ.) : EC 5 ತಿ. ನರಸೀಪುರ 270 ಮೂಗೂರು, ಕ್ರಿ.ಶ.10 ನೇ ಶತಮಾನ, ಪುಟ 649.
19. ಅದೇ : EC 5 ತಿ.ನರಸೀಪುರ 280 ಮೂಗೂರು, ಕ್ರಿ.ಶ. 13ನೇ ಶತಮಾನ, ಪು.653.
20. ಅದೇ : EC 5 ತಿ. ನರಸೀಪುರ 281 ಮೂಗೂರು,ಕ್ರಿ.ಶ. 13 ನೇಶತಮಾನ,ಪು.654.
21. ಎಸ್. ರಾಜೇಂದ್ರಪ್ಪ : ತಿ. ನರಸೀಪುರ ತಾಲ್ಲೂಕು ಗ್ಯಾಸೆಟಿಯರ್ ; ಪುಟ 226.
22. ಕರಿಯಪ್ಪ ಜಿ. : **ಹೊಯ್ಸಳರ ಆಳ್ವಿಕೆಯಲ್ಲಿ ಜೈನರ ಕಲೆ ಮತ್ತು ವಾಸ್ತುಶಿಲ್ಪ** ; ಅಪ್ರಕಟಿತ ಪಿಎಚ್.ಡಿ. ಪ್ರಬಂಧ, ಮೈಸೂರು ವಿಶ್ವವಿದ್ಯಾನಿಲಯ, ಪುಟ 194.
23. ಬಸವರಾಜು ಬಿ ತಗರಪುರ : **ಐತಿಹ್ಯ ದರ್ಶನ** ; ಸುನೀಲ್ ಪ್ರಕಾಶನ, 2018, ಪುಟ 156.
24. ಡಾ. ದೇವರಕೊಂಡಾರೆಡ್ಡಿ :**ಸೋಸಲೆಯ ನಿಸಿದಿ ಶಾಸನ ಇತಿಹಾಸ ದರ್ಶನ ಸಂ–4**.ಪು.8–10.